ಕಂಪ್ಲೆಂಟ್/ಉಪಲೋಕ್/ಎಂವೈಎಸ್/2925/2018

## ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಎಂವೈಎಸ್/2925/2018/ಪಿಪಿ ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್. ಅಂಬೇಡ್ಕರ್ ವೀಧಿ,
ಬೆಂಗಳೂರು,
ದಿನಾಂಕ: 11/08/2020.

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ

ವಿಷಯ: ಶ್ರೀಮತಿ ದಿವ್ಯಾ ಎಸ್., ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು, ತಾಲ್ಲೂಕು ಪಂಚಾಯತಿ ಕಛೇರಿ, ಉಡುಪಿ ಇವರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ದುರ್ನಡತೆ ಎಸಗಿರುವ ಕುರಿತು ವರದಿ.

*****

1. ಶ್ರೀ ಜಯಕಿಶನ್ ಬಿನ್ ಡಾ: ಕ್ಯಾಪ್ಟೆನ್ ಹೆಚ್.ಬಿ.ಶೆಟ್ಟಿ, ಮನೆ ನಂ. 30274 (14) ರೋಟರಿ ಸಮಾಜ ಮಂದಿರ ಕಾಂಪ್ಲೆಕ್ಸ್, ನ್ಯಾಷನಲ್ ಹೈವೇ 66, ವಾರಂಬಳ್ಳಿ ಗ್ರಾಮ, ಬ್ರಹ್ಮಾವರ, ಉಡುಪಿ ತಾಲ್ಲೂಕು ಮತ್ತು ಜಿಲ್ಲೆ (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ಇವರು ಈ ದೂರನ್ನು ಸಲ್ಲಿಸಿ, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ವಾರಂಬಳ್ಳಿ ಗ್ರಾಮ ಪಂಚಾಯತ್, ಬ್ರಹ್ಮಾವರಿ, ಉಡುಪಿ ತಾಲ್ಲೂಕು ಮತ್ತು ಜಿಲ್ಲೆ (ಇನ್ನು ಮುಂದೆ '1ನೇ ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ ಕ್ರಮ ಜರುಗಿಸಲು ಕೋರಿರುತ್ತಾರೆ. ಶ್ರೀಮತಿ ದಿವ್ಯಾ ಎಸ್., ಪಂಚಾಯತಿ ಅಭಿವೃದ್ಧಿ ಅಧಿಕಾರಿ, ತಾಲ್ಲೂಕು ಪಂಚಾಯತಿ, ಉಡುಪಿ (ಇನ್ನು ಮುಂದೆ '2ನೇ ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ಇವರನ್ನು ತನಿಖಾ ಅವಧಿಯಲ್ಲಿ ಸೇರಿಸಿ ತನಿಖೆ ಕೈಗೊಳ್ಳಲಾಗಿರುತ್ತದೆ.

2. ದೂರಿನ ಸಂಕ್ಷಿಪ್ತ ಸಾರಾಂಶ:

ಅನಧಿಕೃತವಾಗಿ ಕಟ್ಟಿದ ಕಟ್ಟಡಕ್ಕೆ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಡೋರ್ ನಂಬರ್ ಮತ್ತು ಎನ್.ಓ.ಸಿ., ಕೊಟ್ಟಿರುವ ಬಗ್ಗೆ ದೂರು ಸಲ್ಲಿಸಿರುತ್ತಾರೆ.

ರೋಟರಿ ಸಮಾಜ ಮಂದಿರವು ರೋಟರಿ ಕ್ಲಬ್, ಬ್ರಹ್ಮಾವರ ಹಾಗೂ ರೋಟರಿ ಸೋಶಿಯಲ್ ವೆಲ್‌ಫೇರ್ ಟ್ರಸ್ಟ್ ಇದರ ಆಡಳಿತಕ್ಕೆ ಒಳಪಟ್ಟ ಸಂಸ್ಥೆಯಾಗಿದ್ದು, ಸದರಿ ಸಂಸ್ಥೆಯ ಅಧ್ಯಕ್ಷರು ಮತ್ತು ಕಾರ್ಯದರ್ಶಿಯವರು ಇದರ ವ್ಯವಹಾರವನ್ನು ನೋಡಿಕೊಳ್ಳುತ್ತಿರುತ್ತಾರೆ.

ರೋಟರಿ ಸಂಸ್ಥೆಯವರು ದಿನಾಂಕ: 08/03/2016 ರಂದು ಪರವಾನಿಗೆ ನಂ. 106/2015-16 ರಂತೆ ಒಂದು ಹೊಸ ಕಟ್ಟಡವನ್ನು ಕಟ್ಟುವುದಾಗಿ ಪರವಾನಿಗೆಯನ್ನು ಪಡೆದುಕೊಂಡಿದ್ದು ಸದರಿ ಪರವಾನಿಗೆಯಲ್ಲಿ ಹೇಳಿರುವ ಎಲ್ಲಾ ಷರತ್ತುಗಳನ್ನು ಉಲ್ಲಂಘನೆ ಮಾಡಿ ಒಂದು ಕಟ್ಟಡವನ್ನು ಕಟ್ಟಿಸಿರುತ್ತಾರೆ. ಸೆಟ್‌ಬ್ಯಾಕ್‌ಗಳನ್ನು ಬಿಟ್ಟಿರುವುದಿಲ್ಲ. ಪರವಾನಿಗೆಯನ್ನು ಪಡೆದುಕೊಳ್ಳುವ ಸಂದರ್ಭದಲ್ಲಿ ಕಟ್ಟಡ ಪುನರ್ ನಿರ್ಮಾಣ ಮತ್ತು ನವೀಕರಣ ಎಂದು ನಮೂದಿಸಿದ್ದು ಕಟ್ಟಡ ರಚನೆ ಎಂದು ಅನುಮತಿಯನ್ನು ಪಡೆದುಕೊಂಡು ಹೊಸ ಕಟ್ಟಡವನ್ನು ಕಟ್ಟಿರುತ್ತಾರೆ. ಈ ಬಗ್ಗೆ ದೂರು ನೀಡಿದ್ದರೂ ಯಾವುದೇ ಕಾನೂನು ಕ್ರಮವನ್ನು ಕೈಗೊಳ್ಳದೇ ಕಟ್ಟಿರುವ ಕಟ್ಟಡಕ್ಕೆ ಡೋರ್ ನಂಬರ್ ಹಾಗೂ ಎನ್.ಓ.ಸಿ.,ಯನ್ನು ನೀಡಿರುತ್ತಾರೆ ಎಂದು ಆರೋಪಿಸಿರುತ್ತಾರೆ.

3. 1ನೇ ಎದುರುದಾರರ ಆಕ್ಷೇಪಣೆಗಳು:-

ಕಟ್ಟಡಕ್ಕೆ ಡೋರ್ ನಂಬರ್ ಮತ್ತು ವಿದ್ಯುತ್ ಎನ್.ಓ.ಸಿ.,ಯನ್ನು ನೀಡುವಾಗ ಪಂಚಾಯತ್ ಆಡಳಿತ ಮಂಡಳಿಯೊಂದಿಗೆ ಪೂರ್ಣ ವಿವರಗಳನ್ನು ಸಮಾಲೋಚಿಸಿಯೇ ಕ್ರಮ ಕೈಗೊಳ್ಳಲಾಗಿದೆ. ಕಾನೂನು ಸಲಹೆಯನ್ನು ಪಡೆದು ಕಟ್ಟಡ ನಂಬರನ್ನು ನೀಡಲಾಗಿರುತ್ತದೆ. ಸರ್ವೆ ನಂ. 186/2 ರಲ್ಲಿನ ಭೂಸ್ವಾದೀನದಿಂದ ಹೊರತಾದ 7.74 ಸೆಂಟ್ಸ್ ಜಾಗದಲ್ಲಿ ಕಟ್ಟಡವನ್ನು ನಿರ್ಮಿಸಿರುವುದು ಕಂಡುಬಂದಿರುತ್ತದೆ. ಪಂಚಾಯತ್ ರಾಜ್ ಕಾಯ್ದೆಯ ಪ್ರಕರಣ 289, 296ಎ, 298, 295ರಡಿ ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವ ಅವಕಾಶವನ್ನು ಪ್ರಾಧಿಕಾರಗಳಿಗೆ ನೀಡಲಾಗಿದೆ ಎಂದು ನಮೂದಿಸಿರುತ್ತಾರೆ.

4. ಕಾರ್ಯ ನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್ ಉಡುಪಿ ರವರ ತನಿಖಾ ವರದಿ:-

ಸರ್ವೆ ನಂ. 186/2 ರಲ್ಲಿ ರೋಟರಿ ಮಂದಿರದ 0.20 ಸೆಂಟ್ಸ್ ಸ್ಥಿರಾಸ್ತಿ ಇದ್ದು, ಕೇಂದ್ರ ಸರಕಾರದ ರಾಷ್ಟ್ರೀಯ ಹೆದ್ದಾರಿ ಅಗಲೀಕರಣಕ್ಕಾಗಿ 12.25 ಸೆಂಟ್ಸ್ ಜಾಗವನ್ನು ಈಗಾಗಲೇ ಸ್ವಾಧೀನ ಪ್ರಕ್ರಿಯೆ ಮಾಡಲಾಗಿದ್ದು ಉಳಿದ 07.74 ಸೆಂಟ್ಸ ಜಾಗದಲ್ಲಿ ಕಟ್ಟಡ ನಿರ್ಮಾಣ ಮಾಡಲಾಗಿರುತ್ತದೆ. ಕಟ್ಟಡವನ್ನು ಷರತ್ತುಗಳಿಗನುಸಾರ ಕನಿಷ್ಟ 4 ಅಡಿ ಇರಬೇಕೆಂದಿದ್ದು ಕಟ್ಟಡದ ಒಂದು ಬದಿ 4 ಅಡಿ ಇಲ್ಲದಿರುವ ಬಗ್ಗೆ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ ಸೆಕ್ಷನ್ 298 ಹಾಗೂ ಪಂಚಾಯತ್ ಸಾಮಾನ್ಯ ಸಭೆ ನಿರ್ಣಯ ನಂ: 89/2018-19 ದಿನಾಂಕ 08/08/2018 ರಂತೆ ರೂ 5000.00 ದಂಡವನ್ನು ವಿಧಿಸಿ ಸದ್ರಿ ಕಟ್ಟಡಕ್ಕೆ ಷರತ್ತು ಬದ್ಧ ನೀರಾಕ್ಷೇಪಣಾ ಪತ್ರ ಹಾಗೂ ಕಟ್ಟಡ ನಂಬರ್ ನೀಡಲಾಗಿರುತ್ತದೆ ಎಂದು ನಮೂದಿಸಿರುತ್ತಾರೆ.

5. ಕಟ್ಟಡಕ್ಕೆ ನೀಡಿದ ಪರವಾನಗಿಯಲ್ಲಿ ನಿರಾಕ್ಷೇಪಣಾ ಪತ್ರದಲ್ಲಿ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಾದ ಶ್ರೀಮತಿ ದಿವ್ಯಾ ಎಸ್., ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು, ತಾಲ್ಲೂಕು ಪಂಚಾಯತಿ ಕಛೇರಿ, ಉಡುಪಿ ಇವರು ಸಹಿ ಮಾಡಿರುವುದಾಗಿ ಮಾಹಿತಿ ಸಲ್ಲಿಸಿರುತ್ತಾರೆ. ಆದುದರಿಂದ, ಅವರನ್ನು 2ನೇ ಎದುರುದಾರರನ್ನಾಗಿ ಸೇರಿಸಿ ಆಕ್ಷೇಪಣೆ ಕರೆಯಲಾಗಿರುತ್ತದೆ.

6. 2ನೇ ಎದುರುದಾರರ ಆಕ್ಷೇಪಣೆಗಳು:-

ಪಂಚಾಯತ್ ಸಾಮಾನ್ಯ ಸಭೆ ನಿರ್ಣಯ ದಿನಾಂಕ: 08/03/2016 ರಂತೆ ಕಟ್ಟಡ ಪರವಾನಗಿಯನ್ನು ನೀಡಲಾಗಿರುತ್ತದೆ. ಸೆಟ್

4

ಬ್ಯಾಕ್ ಬಿಡದೆ ಕಟ್ಟಡ ನಿರ್ಮಿಸುತ್ತಿರುವ ಕುರಿತು ಆಕ್ಷೇಪಣೆ ಬಂದಿದ್ದು, ದಿನಾಂಕ: 23/07/2016 ರಂದು ಕಾರ್ಯದರ್ಶಿ, ರೋಟರಿ ವೆಲ್‌ಫೇರ್ ಟ್ರಸ್ಟ, ರೋಟರಿ ಸಮಾಜ ಮಂದಿರ ಇವರಿಗೆ ಲಿಖಿತ ನೋಟೀಸು ನೀಡಿದ್ದು, ಕಟ್ಟಡಕ್ಕೆ ಸೂಕ್ತ ಸೆಟ್ ಬ್ಯಾಕ್ ಬಿಡುವಂತೆ ಸೂಚಿಸಲಾಗಿರುತ್ತದೆ.

ದಿನಾಂಕ: 05/08/2016 ರಂದು ಕಾರ್ಯದರ್ಶಿ, ಇವರು ನೋಟೀಸಿಗೆ ಉತ್ತರಿಸಿದ್ದು, 7.45 ಸೆಂಟ್ಸ್ ಜಾಗದಲ್ಲಿ ನಿಯಮಾನುಸಾರ ಯಾವುದೇ ರೀತಿಯಲ್ಲಿ ಯಾರಿಗೂ ತೊಂದರೆ ಆಗದಂತೆ ಕಟ್ಟಡ ನಿರ್ಮಿಸುವುದಾಗಿ ಹಾಗೂ ಸೆಟ್ ಬ್ಯಾಕ್ ಗಳನ್ನು ಇಟ್ಟು ಕಟ್ಟಡ ನಿರ್ಮಿಸುತ್ತೇವೆಂದು ದೃಢೀಕರಿಸಿರುತ್ತಾರೆ.

ದಿನಾಂಕ: 24/06/2017 ರಂದು ಕಾರ್ಯದರ್ಶಿ, ಇವರು ತಮ್ಮ ನೂತನ ಕಟ್ಟಡಕ್ಕೆ ಡೋರ್ ನಂಬರ್ ನೀಡುವಂತೆ ಮನವಿ ನೀಡಿರುತ್ತಾರೆ.

ದಿನಾಂಕ: 28/03/2018 ರಂದು ಮತ್ತೊಮ್ಮೆ ಕಟ್ಟಡ ನಂಬರ್ ಗಾಗಿ ಪರಿಷ್ಕೃತ ವಿನ್ಯಾಸ ನಕ್ಷೆ ಅನುಮೋದಿಸುವಂತೆಯೂ ಮನವಿ ಸಲ್ಲಿಸಿರುತ್ತಾರೆ.

ಸದ್ರಿ ಮನವಿಯನ್ನು ದಿನಾಂಕ: 22/06/2018 ರ ಸಾಮಾನ್ಯ ಸಭೆಯಲ್ಲಿ ಚರ್ಚಿಸಲಾಗಿ ದಿನಾಂಕ: 22/06/2018 ರಂತೆ ಪಂಚಾಯತ್ ಅಧ್ಯಕ್ಷರು ಮತ್ತು ಉಪಸ್ಥಿತರಿದ್ದ ಸರ್ವ ಸದಸ್ಯರು ನಿರ್ಣಯಿಸಿದಂತೆ ಷರತ್ತುಬದ್ಧ ಡೋರ್ ನಂಬರ್ ಮತ್ತು ಎನ್.ಓ.ಸಿ. ನೀಡಲಾಗಿರುತ್ತದೆ.

ಈ ಬಗ್ಗೆ ದಿನಾಂಕ: 08/08/2018 ರ ಸಾಮಾನ್ಯ ಸಭೆ ನಿರ್ಣಯದಂತೆ ಚರ್ಚಿಸಲಾಗಿರುತ್ತಾರೆ. ಕಟ್ಟಡದ ಒಂದು ಬದಿ ಸೆಟ್ ಬ್ಯಾಕ್ ಬಿಡದೇ ಇರುವ ಕಾರಣ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 298 ರಂತೆ ದಂಡವನ್ನು ವಸೂಲಿ ಮಾಡಲಾಗಿರುತ್ತದೆ. ಹಾಗೂ ಸದ್ರಿ ಸಂಸ್ಥೆಯವರು ತಮ್ಮ ಕಟ್ಟಡದ ವಿನ್ಯಾಸವನ್ನು ಬದಲಾಯಿಸಿ ಕಟ್ಟಡ ನಿರ್ಮಿಸಿರುವುದರಿಂದ ಕಟ್ಟಡದ ವಿನ್ಯಾಸ

ನಕ್ಷೆಯನ್ನು ಪರಿಷ್ಕರಿಸಿ ನೀಡಲು ತಿಳಿಸಲಾಗಿರುತ್ತದೆ. ಒಟ್ಟು 791.07 ಚ.ಮೀ. ನ ಕಟ್ಟಡದ ವಿನ್ಯಾಸವನ್ನು ಮಾಡಿರುತ್ತಾರೆ.

ಕಾನೂನು ಸಲಹೆಗಾರರ ಅಭಿಪ್ರಾಯದಂತೆ ಕಟ್ಟಡಕ್ಕೆ ಬಾಗಿಲು ನಂಬರ್ ನೀಡಲು ತಿಳಿಸಿದಂತೆ ದಿನಾಂಕ: 27/06/2018 ರಂದು ಪಂಚಾಯತ್ ಸಾಮಾನ್ಯ ನಿರ್ಣಯದಂತೆ ಷರತ್ತುಬದ್ಧ ಡೋರ್ ನಂಬರ್ ಮತ್ತು ಎನ್.ಓ.ಸಿ. ನೀಡುವಾಗ ಪಂಚಾಯತ್ ಆಡಳಿತ ಮಂಡಳಿಯ ಎದುರು ಯಾವುದೇ ತನಿಖೆ ಬಾಕಿ ಇರುವ ಕುರಿತು ಮರೆಮಾಚಿರುವುದಿಲ್ಲ. ಪಂಚಾಯತ್ ಆಡಳಿತ ಮಂಡಳಿಯೊಂದಿಗೆ ಪೂರ್ಣ ವಿವರಗಳನ್ನು ಸಮಾಲೋಚಿಸಿಯೇ ಕ್ರಮ ಕೈಗೊಳ್ಳಲಾಗಿರುತ್ತದೆ ಎಂದು ನಮೂದಿಸಿರುತ್ತಾರೆ.

7. ತನಿಖಾ ಅವಧಿಯಲ್ಲಿ ಸಂಗ್ರಹಿಸಿದ ಆಧಾರಗಳನ್ನು ಪರಿಶೀಲಿಸಲಾಗಿರುತ್ತದೆ.

a) ಉಡುಪಿ ತಾಲ್ಲೂಕಿನ ವಾರಂಬಳ್ಳಿ ಗ್ರಾಮದ ಸರ್ವೆ ನಂ. 186 ರಲ್ಲಿ ರೋಟರಿ ಸಮಾಜ ಮಂದಿರವಿದ್ದು ಫಿರ್ಯಾದುದಾರರು ಮತ್ತು ಇತರರು ಸದರಿ ರೋಟರಿ ಸಮಾಜ ಮಂದಿರದ ವ್ಯಾಪಾರ ಸಂಕೀರ್ಣದಲ್ಲಿ 1992 ರಿಂದ ವ್ಯಾಪಾರ ನಡೆಸಿಕೊಂಡು ಬಂದಿರುತ್ತಾರೆ. ರೋಟರಿ ಸಮಾಜ ಮಂದಿರವು ರೋಟರಿ ಕ್ಲಬ್, ಬ್ರಹ್ಮಾವರ ಹಾಗೂ ರೋಟರಿ ಸೋಶಿಯಲ್ ವೆಲ್‌ಫೇರ್ ಟ್ರಸ್ಟ ಇವರ ಆಡಳಿತಕ್ಕೆ ಒಳಪಟ್ಟಿರುತ್ತದೆ.

b) ರಾಷ್ಟ್ರೀಯ ಹೆದ್ದಾರಿ 66 ಅಗಲೀಕರಣ ಕಾಮಗಾರಿಯ ಅವಧಿಯಲ್ಲಿ ಸದರಿ ವ್ಯಾಪಾರಸ್ಥರು ನಡೆಸುತ್ತಿದ್ದ ವಾಣಿಜ್ಯ ಸಂಕೀರ್ಣದ ಸ್ವಲ್ಪ ಭಾಗ ಭೂ ಸ್ವಾಧೀನಗೊಂಡಿರುತ್ತದೆ. ರೋಟರಿ ಸಂಸ್ಥೆಯವರು ವಾಣಿಜ್ಯ ಸಂಕೀರ್ಣದ ಕಟ್ಟಡಕ್ಕೆ ತಾಗಿಕೊಂಡು ಸರ್ವೆ ನಂ. 186/2ರಲ್ಲಿ 7.75 ಸೆಂಟ್ಸ್ ಸ್ಥಿರಾಸ್ತಿಯಲ್ಲಿ ಹೊಸ ಕಟ್ಟಡವನ್ನು ನಿಯಮ ಬಾಹಿರವಾಗಿ ನಿರ್ಮಿಸಿರುವುದಾಗಿ ಆರೋಪಿಸಿದ್ದು ಎದುರುದಾರರು ಸದರಿ ಕಟ್ಟಡಕ್ಕೆ ಕಟ್ಟಡ ಸಂಖ್ಯೆ ಮತ್ತು ವಿದ್ಯುತ್ ಸಂಪರ್ಕ

ಪಡೆಯಲು ನಿಯಮಬಾಹಿರವಾಗಿ ನಿರಾಕ್ಷೇಪಣಾ ಪತ್ರವನ್ನು ನೀಡಿರುವುದಾಗಿ ದೂರು ಸಲ್ಲಿಸಿರುತ್ತಾರೆ.

c) ವಾರಂಬಳ್ಳಿ ಗ್ರಾಮದ ಸರ್ವೆ ನಂ. 186/2 ರಲ್ಲಿ 7.75 ಸೆಂಟ್ಸ್ ಜಾಗದಲ್ಲಿ ಆರ್.ಸಿ.ಸಿ., ರೋಟರಿ ಭವನ ರಚಿಸಲು ಪಂಚಾಯತ್ ನಿರ್ಣಯ ಸಂಖ್ಯೆ: 184/2015-16 ದಿನಾಂಕ: 02/03/2016 ರಂತೆ ಅನುಮತಿಯನ್ನು ನೀಡಿರುತ್ತಾರೆ. ಪರವಾನಗಿ ನಿಯಮ ಉಲ್ಲಂಘಿಸಿ ಸೆಟ್‌ಬ್ಯಾಕ್ ಬಿಡದೆ ರಚನೆ ಮಾಡಿದ್ದರು ಅಕ್ರಮವಾಗಿ ಎದುರುದಾರರು ಕಟ್ಟಡ ಸಂಖ್ಯೆ ಎನ್.ಓ.ಸಿ., ನೀಡಿರುತ್ತಾರೆಂದು ದೂರು ಸಲ್ಲಿಸಿರುತ್ತಾರೆ. ಡೋರ್ ನಂ. 274/1, 2, 3, 4 ಎಂದು ಸಂಖ್ಯೆ ನೀಡಿದ್ದು ಕಟ್ಟಡ ಸಂಖ್ಯೆ 3-678(1)(2)(3) ಕ್ಕೆ ಶಾಶ್ವತ ವಿದ್ಯುತ್ ಅಳವಡಿಸಲು ಪಂಚಾಯತಿಯಿಂದ ನಿರಾಪೇಕ್ಷಣ ಪತ್ರವನ್ನು ನೀಡಿರುತ್ತಾರೆ. ದಿನಾಂಕ: 10/01/2018ರ ಪಂಚಾಯತಿ ಸಾಮಾನ್ಯ ಸಭೆಯಲ್ಲಿ ಸದಿ ರೋಟರಿ ಸೋಷಿಯಲ್ ವೆಲ್‌ಫೇರ್ ಟ್ರಸ್ಟ್‌ನ ಕಟ್ಟಡದ ಬಗ್ಗೆ ಆಕ್ಷೇಪಣೆಗಳು ಬಂದ ಮೇರೆಗೆ ಕಟ್ಟಡವನ್ನು ಅಳತೆ ಮಾಡಿಸಿ ಸೂಕ್ತ ಕ್ರಮ ಕೈಗೊಳ್ಳಲು ಹಾಗೂ ಸಂಬಂಧಪಟ್ಟ ಇಲಾಖೆಗಳಿಗೆ ಬರೆಯಲು ನಿರ್ಣಯಿಸಲಾಗಿರುವುದು ಕಂಡುಬಂದಿರುತ್ತದೆ.

d) ವಾರಂಬಳ್ಳಿ ಗ್ರಾಮದ ಸರ್ವೆ ನಂ. 186ರ ಜಮೀನು 0.20 ಸೆಂಟ್ಸ್ ಇದ್ದು ರೋಟರಿ ಕ್ಲಬ್ ಬ್ರಹ್ಮಾವರ ಇವರ ಸ್ವಾಧೀನದಲ್ಲಿ 7.74 ಸೆಂಟ್ಸ್ ಜಾಗ ಖಾತೆ ನಂ. 1103ರನ್ನು ಎಂ.ಆರ್. 130/90-91ರ ರೀತ್ಯಾ ಸ್ವಾಧೀನತೆ ಹೊಂದಿರುತ್ತಾರೆ. ಉಳಿದ ಜಾಗ 12.26.00 ಸೆಂಟ್ಸ್ ಜಮೀನು ಕೇಂದ್ರ ಸರ್ಕಾರದ ರಾಷ್ಟ್ರೀಯ ಹೆದ್ದಾರಿ ಸಲುವಾಗಿ 2015-16ರಲ್ಲಿ ದಿನಾಂಕ: 14/06/2016 ರಂದು ಭೂಸ್ವಾಧೀನವಾಗಿರುತ್ತದೆ. ಸದರಿ ಮಾಹಿತಿಯನ್ನು 2016-17ನೇ ಸಾಲಿನ ಆರ್.ಟಿ.ಸಿ., ಪ್ರತಿಯಲ್ಲಿ ನಮೂದಿಸಲಾಗಿರುತ್ತದೆ.

e) ದಿನಾಂಕ: 08/03/2016ರ ಪಂಚಾಯತಿ ಸಭೆ ನಿರ್ಣಯದಂತೆ 73/4 ಸೆಂಟ್ಸ್ ಜಾಗದಲ್ಲಿ ಆರ್.ಸಿ.ಸಿ., ರೋಟರಿ ಭವನ ಕಟ್ಟಡವನ್ನು ದಿನಾಂಕ: 30/03/2016

ರಿಂದ 29/03/2019 ರವರೆಗೆ ರಚಿಸಲು ಪರವಾನಗಿ ನೀಡಲಾಗಿದೆ. ಕಟ್ಟಡದ ಪ್ರತಿ ಮೂಲೆಯಲ್ಲಿ ಕನಿಷ್ಟ 4 ಅಡಿ ಅಂತರ ಖಾಲಿ ಇಡತಕ್ಕದ್ದು, ರಾಷ್ಟ್ರೀಯ ಹೆದ್ದಾರಿ ರಸ್ತೆ ಮಧ್ಯದಿಂದ 45 ಮೀಟರ್ ಅಂತರವಿಟ್ಟು ರಚನೆ ಮಾಡಲು ಷರತ್ತು ವಿಧಿಸಿರುತ್ತಾರೆ. ದಿನಾಂಕ: 27/06/2018 ರಂದು ಸದರಿ ಕಟ್ಟಡಕ್ಕೆ ಕಟ್ಟಡ ಸಂಖ್ಯೆಯನ್ನು ಪಂಚಾಯತಿಯಿಂದ ನೀಡಲಾಗಿರುತ್ತದೆ. ಅದೇ ದಿನ ವಿದ್ಯುತ್ ಸಂಪರ್ಕ ಪಡೆಯಲು ಪಂಚಾಯತಿಯಿಂದ ನಿರಾಕ್ಷೇಪಣಾ ಪತ್ರ ನೀಡಲಾಗಿದೆ. ಪಂಚಾಯತ್ ದಾಖಲೆಗಳಾದ ಪರವಾನಗಿ, ಅನುಮೋದಿತ ನಕ್ಷೆ, ಕಟ್ಟಡ ಸಂಖ್ಯೆ ನೀಡಿದ ದಾಖಲೆ, ನಿರಾಕ್ಷೇಪಣಾ ಪತ್ರ ಈ ದಾಖಲೆಗಳಲ್ಲಿ ಒಬ್ಬರೇ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಸಹಿ ಮಾಡಿರುವುದು ಕಂಡುಬಂದಿರುತ್ತದೆ.

f) ವಿಧಿಸಿದ ಷರತ್ತಿನಂತೆ ಪ್ರತಿ ಮೂಲೆಯಲ್ಲಿ 4 ಅಡಿ ಅಂತರ ಖಾಲಿ ಬಿಟ್ಟು ಕಟ್ಟಡ ಕಟ್ಟಬೇಕಿದ್ದು ಕಟ್ಟಡದ ಒಂದು ಬದಿ ನಿಯಮ ಮೀರಿ ಸೆಟ್ ಬ್ಯಾಕ್ ಬಿಡದೆ ಕಟ್ಟಡ ನಿರ್ಮಿಸಿದ್ದು ಪಂಚಾಯತ್ ಸಾಮಾನ್ಯ ಸಭೆ ನಿರ್ಣಯದಂತೆ ರೂ.5,000/- ದಂಡ ವಿಧಿಸಿರುವುದು ಕಂಡುಬಂದಿರುತ್ತದೆ.

g) ಕಟ್ಟಡದ ಪರವಾನಗಿಯಲ್ಲಿ ಗ್ರಾಮ ಪಂಚಾಯಿತಿ ಕಾಯ್ದೆ 1993 ರ ಪ್ರಕರಣ 64 ರ ಅನ್ವಯ ಯಾವುದೇ ಷರತ್ತು ಉಲ್ಲಂಘಿಸಿದಲ್ಲಿ ಪರವಾನಗಿಯನ್ನು ರದ್ದು ಪಡಿಸಲಾಗುವುದು ಎಂದು ಷರತ್ತು ವಿಧಿಸಿದ್ದು ಕಟ್ಟಡದ ಒಂದು ಬದಿ 4 ಅಡಿ ಬಿಡದೆ ಕಟ್ಟಡ ನಿರ್ಮಿಸಿದ್ದರೂ 2ನೇ ಎದುರುದಾರರು ಪರವಾನಗಿ ರದ್ದುಪಡಿಸಲು ಕ್ರಮ ಜರುಗಿಸಿರುವುದಿಲ್ಲ. ನಿಯಮಬಾಹಿರವಾಗಿ ಕಟ್ಟಡ ಕಟ್ಟದಂತೆ ಪ್ರಾರಂಭದ ಹಂತದಲ್ಲಿಯೇ 2ನೇ ಎದುರುದಾರರು ಕ್ರಮ ಜರುಗಿಸದೆ ಕರ್ತವ್ಯಲೋಪ ಎಸಗಿರುವುದು ಕಂಡುಬಂದಿರುತ್ತದೆ. ಪರವಾನಗಿ ಷರತ್ತು ಉಲ್ಲಂಘಿಸಿದಲ್ಲಿ ಪರವಾನಗಿಯನ್ನು ಪ್ರಾರಂಭದಲ್ಲಿಯೇ ರದ್ದುಪಡಿಸುವ ಅಧಿಕಾರ ವ್ಯಾಪ್ತಿ 2ನೇ ಎದುರುದಾರರಾಗಿದ್ದು ಸದ್ರಿಯವರಿಂದ ಅಗತ್ಯ ಕ್ರಮ ಜರುಗಿಸದೆ ಕರ್ತವ್ಯ ಲೋಪ ಎಸಗಿರುವುದು ಕಂಡುಬಂದಿರುತ್ತದೆ.

8. ಮೇಲೆ ಚರ್ಚಿಸಿದ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ನಾಗರೀಕ ಸೇವೆ (ನಡತೆ) ನಿಯಮ 1966ರ ನಿಯಮಗಳು 3(1) (i) ರಿಂದ (iii) ರನ್ವಯ 2ನೇ ಎದುರುದಾರರು ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುತ್ತಾರೆಂದು ಕಂಡುಬಂದಿದ್ದರಿಂದ, **2ನೇ ಎದುರುದಾರರಾದ**– ಶ್ರೀಮತಿ ದಿವ್ಯಾ ಎಸ್.. ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು, ತಾಲ್ಲೂಕು ಪಂಚಾಯತಿ ಕಛೇರಿ, ಉಡುಪಿ ಇವರ ವಿರುದ್ಧ ಶಿಸ್ತು ನಡವಳಿಕೆ ಕ್ರಮ ಜರುಗಿಸಲು ಹಾಗೆಯೇ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14–ಎ ರ ಅಡಿಯಲ್ಲಿ ಇಲಾಖಾ ವಿಚಾರಣೆ ನಡೆಸಲು ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(3) ರನ್ವಯ ಪ್ರದತ್ತವಾದ ಅಧಿಕಾರದಡಿ, ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಿದೆ.

9. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(4) ರ ಪ್ರಕಾರ, ಶಿಸ್ತು ಪ್ರಾಧಿಕಾರವು ವರದಿಯನುಸಾರ ಕೈಗೊಂಡ ಕ್ರಮದ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ, ಈ ವರದಿ ತಲುಪಿದ ದಿನಾಂಕದಿಂದ **ಮೂರು ತಿಂಗಳೊಳಗಾಗಿ** ಈ ಪ್ರಾಧಿಕಾರಕ್ಕೆ ವರದಿ ಮಾಡಲು ಸೂಚಿಸಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿದೆ.

11-8-20

[ನ್ಯಾಯಮೂರ್ತಿ ಬಿ.ಎಸ್. ಪಾಟೀಲ]
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ, ಬೆಂಗಳೂರು.